## ಡಿಜಿಟಲ್ ಯುಗ

‘ಡಿಜಿಟಲ್ ಊರಲ್ಲಿ ನೆಮ್ಮದಿ ಎಲ್ಲಿ’ (ಚೈತ್ರಿಕಾ ನಾಯ್ಕ ಹರ್ಗಿ, ಜು.28) ಮುಖಪುಟ ಲೇಖನ ಮಾಹಿತಿಪೂರ್ಣವಾಗಿದೆ. ನಮ್ಮ ಬಹುಮುಖ್ಯ ಸಮಸ್ಯೆ ಯೊಂದರ ಆಳ ಅಗಲಗಳನ್ನೆಲ್ಲ ತುಂಬ ಸಕಾರಾತ್ಮಕವಾಗಿ ಅಳೆಯಲಾಗಿದೆ. ಇಂದಿನ ಡಿಜಿಟಲ್ ಯುಗಕ್ಕೆ ಪೂರಕವಾಗಿದ್ದು, ಯುವಜನರೆಲ್ಲ ಓದಲೇ ಬೇಕಾದ ಲೇಖನವಿದು.

—ಹುರುಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ

## ಮಾಯಾಬಜಾರ್



ಡಿಜಿಟಲ್ ಸಾಮಾಜಿಕ ಜಾಲತಾಣದಲ್ಲಿ ನೆಮ್ಮದಿ ಶೂನ್ಯವೇ ಸರಿ. ಇಂದಿನ ಯುವ ಪೀಳಿಗೆಯಿಂದ ವಯಸ್ಕರ ತನಕ ಸೋಷಿಯಲ್ ಮೀಡಿಯಾ ಎನ್ನುವುದು ಒಂದು ಮಾಯಾಬಜಾರ್ ಆಗಿದೆ. ಎಲ್ಲಿ ಕುಳಿತರೂ ಅವರಿಗೆ ಅದರ ಅರಿವು ಕೂಡ ಇರುವುದಿಲ್ಲ. ಹೆಣ್ಣು ಗಂಡು ಅನ್ನೋ ಭೇದಭಾವ ಬಹಳ ದೂರದ ಮಾತು. ಯುವಕರಂತೆ ವಯಸ್ಕರೂ ಇಂದಿನ ಡಿಜಿಟಲ್ ಯುಗಕ್ಕೆ ಅಪ್‌ಡೇಟ್ ಆಗಿರೋದು ಅಷ್ಟೇ ಸತ್ಯ. ಎಷ್ಟು ಹೊಸ ತಂತ್ರಜ್ಞಾನ ಆವಿಷ್ಕಾರ ಆಗುತ್ತದೋ ಅದರ ಸಾಧಕ ಬಾಧಕ ಎರಡರ ಕಡೆಗೂ ಗಮನಕೊಡುವುದು ಉತ್ತಮ.

—ಮೇಘನಾ ರಘುನಂದನ್, ಹೂವಿನ ಹಡಗಲಿ

## ಮೊಬೈಲ್ ಕುಲುಮೆ

‘ಮೊಬೈಲ್ ಕುಲುಮೆ’, ಸ್ವರೂಪಾನಂದ ಕೊಟ್ಟೂರು (ಜು. 28) ಅವರ ಲೇಖನ ಓದಿ ಕರುಳು ಮಿಡಿಯಿತು. ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬಂದು ಕುಲುಮೆ ಕೆಲಸ ಮಾಡುವುದರ ಮೂಲಕ ಕೃಷಿಕರ ಮನಗೆದ್ದ ಕಮ್ಮಾರರ ಬದುಕು ಸ್ಮರಣೀಯ. ಕನ್ನಡ ಕಲಿತು, ಕನ್ನಡವನ್ನು ಶುದ್ಧವಾಗಿ ಮಾತನಾಡಿ ಕನ್ನಡಿಗರ ಪ್ರೀತಿಗೆ ಪಾತ್ರರಾದ ಈ ಕುಶಲಕರ್ಮಿಗಳು ಅಭಿನಂದನೆಗೆ ಪಾತ್ರರು. ಅದರಲ್ಲೂ ಮಹಿಳೆಯರು ದಿಟ್ಟತನದಿಂದ ಬದುಕು ಸಾಗಿಸುತ್ತಿರುವ ರೀತಿ ಶ್ಲಾಘನೀಯ.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ದೂರದ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಕುಟುಂಬಸಹಿತ ಬಂದು ಬದುಕಿನ ತುತ್ತಿನ ಚೀಲ ತುಂಬಿಸಿಕೊಳ್ಳುತ್ತಿರುವ ಕಮ್ಮಾರ ಕಸುಬುದಾರರು ಇಲ್ಲಿಗೆ ಅನಿವಾರ್ಯ ಕೂಡ ಆಗಿದ್ದಾರೆ. ಗಟ್ಟಿಗಿತ್ತಿ ಹೆಂಗಸರು ಕೂಡ ಸಾಥ್ ನೀಡುತ್ತಾರೆ. ಇವರ ಕನ್ನಡ ಪ್ರೀತಿ ಅಭಿನಂದನೀಯ.

—ಭಾರತೀ ಗಂಗಾಧರ್, ಬೆಂಗಳೂರು

## ಟೊಟೊ ಪುರಸ್ಕಾರ

ಕನ್ನಡದ ಸೃಜನಶೀಲ ಯುವ ಬರಹಗಾರರಿಗೆ ಮೀಸಲಾದ ಟೊಟೊ ಫಂಡ್ಸ್ ದಿ ಆರ್ಟ್ಸ್ ಸಂಸ್ಥೆಯು 2023ನೇ ಸಾಲಿನ ಟೊಟೊ ಪುರಸ್ಕಾರಕ್ಕಾಗಿ ಪ್ರವೇಶಗಳನ್ನು ಆಹ್ವಾನಿಸುತ್ತಿದೆ.

ಬರಹಗಾರರು 18 ರಿಂದ 29 ವರ್ಷ ವಯಸ್ಸಿನವರಾಗಿರಬೇಕು. ಪ್ರವೇಶಗಳನ್ನು ಕಥೆ, ಕವಿತೆ ಮತ್ತು ನಾಟಕ ಈ ಮೂರರಲ್ಲಿ ಯಾವುದೇ ಪ್ರಕಾರದಲ್ಲಿಯಾದರೂ ಕಳಿಸಬಹುದು. ಟೊಟೊ ಪುರಸ್ಕಾರವು 50 ಸಾವಿರ ರೂಪಾಯಿ ನಗದು ಬಹುಮಾನ ಒಳಗೊಂಡಿದೆ.

ಪ್ರವೇಶಗಳನ್ನು ಕಳುಹಿಸಲು ಕೊನೆಯ ದಿನಾಂಕ 15 ಸೆಪ್ಟೆಂಬರ್, 2022. ಪ್ರವೇಶಗಳನ್ನು totokannada@gmail.com ಗೆ ಇಮೇಲ್ ಮಾಡಿ. ಅರ್ಜಿ ಮತ್ತು ವಿವರಗಳಿಗೆ: http://totofundsthearts.blogspot.com

## ಭಾರತಕ್ಕೆ ಕೀರ್ತಿ ತರಲಿ



ಚದುರಂಗ ಲೇಖನ ‘ಚೋಟಾ ಚಾಂಪಿಯನ್ಸ್’ (ನಾಗೇಶ್ ಶೆಣೈ ಪಿ., ಜು. 28) ಓದಿ ಸಂತೋಷ ಆಯಿತು. ಕ್ರಿಕೆಟ್ ಬಿಟ್ಟರೆ ನಮ್ಮ ದೇಶದ ಎಲ್ಲ ಕ್ರೀಡೆಗಳಿಗೆ ಪ್ರೋತ್ಸಾಹ ಇಲ್ಲ. ಇದು ಬಹು ದುಃಖಕರ. ಮುಂಬರುವ ಚೆಸ್ ಒಲಿಂಪಿಯಾಡ್‌ನಲ್ಲಿ ಈ ಚೋಟಾ ಚಾಂಪಿಯನ್ಸ್ ಭಾರತಕ್ಕೆ ಕೀರ್ತಿ ತರಲಿ ಹಾರೈಸುವೆ.

—ಬಸವರಾಜ ಹರಿಹರ, ಧಾರವಾಡ

‘ಚೋಟಾ ಚಾಂಪಿಯನ್ಸ್’ ಬಗ್ಗೆ ಓದಿ ಸಂತೋಷಪಟ್ಟೆ. ಅಲ್ಲದೆ ‘ಡಿಜಿಟಲ್ ಊರಲ್ಲಿ ನೆಮ್ಮದಿ ಎಲ್ಲಿ...’ ಮುಖಪುಟ ಹೊತ್ತು ಬಂದ ‘ಸುಧಾ’ದ ಎಲ್ಲ ಲೇಖನಗಳು ಚೆನ್ನಾಗಿವೆ. ಪ್ರತಿಯೊಂದು ಸಂಚಿಕೆಯ ಲೇಖನಗಳು ಎಚ್ಚರ ನೀಡುತ್ತಿವೆ. ಆದರೆ ಎಲ್ಲ ಪೋಷಕರಿಗೆ ಈ ಲೇಖನಗಳನ್ನು ಓದುವಷ್ಟು ತಾಳ್ಮೆಯಿದೆಯೇ ಎಂಬುದು ಪ್ರಶ್ನೆ.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

## ಮನಮೋಹಕ ಹಕ್ಕಿಗಳು!

‘ಹಕ್ಕಿಗಳು ಸಾರ್ ಹಕ್ಕಿಗಳು’ (ಈರಣ್ಣ ಬೆಂಗಾಲಿ, ಆ. 4) ಬರಹದ ನಿರೂಪಣೆ ಹಾಗೂ ಸುಜಿತ್ ಅವರ ಚಿತ್ರಗಳು ಮನಮೋಹಕವಾಗಿದ್ದು, ನಿಜಕ್ಕೂ ಬೆರಗಾಗಿಸುತ್ತದೆ. ರಾಯಚೂರಿನಲ್ಲಿ ಇಂತಹ ಮೋಹಕ ಪಕ್ಷಿಗಳು ಕಾಣಸಿಗುತ್ತದೆ ಎಂದು ನಂಬುವುದೇ ಅಸಾಧ್ಯ.

—ರೇಖಾ ಚೈತನ್ಯ, ಬೆಂಗಳೂರು

## ವಿಟಮಿನ್ ಡಿ

‘ವಿಟಮಿನ್ ಡಿ ನಮಗೇಕೆ ಬೇಕು?’ (ಡಾ.ಕೆ. ಜಯಲಕ್ಷ್ಮಿ, ಜು. 28) ಆರೋಗ್ಯ ಬರಹ ಉಪಯುಕ್ತ ಮಾಹಿತಿಗಳಿಂದ ಕೂಡಿದೆ. ಜೀವಕ್ರಿಯೆಗಳ ನಿರ್ವಹಣೆಯಲ್ಲಿ ವಿಟಮಿನ್ ಡಿ ಅಗತ್ಯ, ಇದರ ಕೊರತೆ ಆದಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ವಿಚಾರಗಳನ್ನು ವಿಸ್ತಾರವಾಗಿ ಲೇಖಕರು ತಿಳಿಸಿದ್ದಾರೆ.

—ಶಾಂತ ಕುಮಾರ್, ಸರ್ಜಾಪುರ

‘ಪಾಲನೆ ಪೋಷಣೆ’ಯಲ್ಲಿ (ಸ್ವಯಂಪ್ರಭಾ, ಜು. 28) ‘ಮಕ್ಕಳಿಗೆ ಬೇಡ ಬಿಸಿಲಿನ ಬಡತನ’ ಬರಹದ ಶೀರ್ಷಿಕೆಯೇ ಒಂದು ಅದ್ಭುತ. ಇತ್ತೀಚಿನ ಜೀವನ ಶೈಲಿಯಲ್ಲಿ ಶೇ.75ರಷ್ಟು ಮಕ್ಕಳು ಹೀಗೆಯೇ ಬೆಳೆಯುತ್ತಿದ್ದಾರೆ. ಇದೇ ರೀತಿ ಮಕ್ಕಳು ಬಿಸಿಲಿಗೆ ಮೈಯೊಡ್ಡಿ ಹೊರಗೇ ಬರದಿದ್ದರೆ, ಅವರ ಮುಂದೆ ಅವರ ಕಾರ್ಯ ಚಟುವಟಿಕೆಗಳ ಮೇಲೆ ದುಷ್ಪರಿಣಾಮಗಳಾಗುವುದಂತೂ ಸತ್ಯ.

—ಸುಧೀಂದ್ರ. ಎನ್., ಬೆಂಗಳೂರು

## ನಾ. ಡಿಸೋಜ ಕಥೆ

‘ಎಳೆಯರ ಅಂಗಳ’ದಲ್ಲಿ ಮೂಡಿಬಂದ (ನಾ. ಡಿಸೋಜ, ಜು. 28) ಕಥೆ ‘ಬೊಗಸೆ ನೀರು’ ಹನಿ ನೀರಿನ ಪ್ರಾಮುಖ್ಯತೆಯನ್ನು ರಂಜನೀಯವಾಗಿ ತಿಳಿಸಿದೆ.

—ಎಚ್. ಸಿದ್ದಾರ್ಥ, ಉಡುಪಿ

## ಮೊಬೈಲ್ ಇತಿಮಿತಿ

‘ನಿಮ್ಮೊಡನೆ’ಯಲ್ಲಿ ‘ಪಾಪದ ಫಲಗಳ ಕೈಯಲ್ಲಿ ಹಿಡಿದು...’ (ರಘುನಾಥ ಚ.ಹ. ಜು. 28) ಬರಹ ಮೊಬೈಲ್ ಸಾಧನದ ಬಳಕೆಯ ಇತಿಮಿತಿಗಳ ಮೇಲೆ ಬೆಳಕು ಚೆಲ್ಲಿದೆ. ಮೊಬೈಲ್ ತಂತ್ರಜ್ಞಾನ ಕಾಲಿಟ್ಟ ಕ್ಷಣ ಇಡೀ ಜಗತ್ತಿಗೆ ‘ಕಂಡರಿಯದ ಅದ್ಭುತ’, ಸ್ವರ್ಗವೇ ಧರೆಗಿಳಿದಂತಹ ಅನುಭವ. ಆದರೆ ಇಂದು ಮೊಬೈಲ್‌ನಿಂದ ಅನೇಕರ ಬದುಕು ಸ್ವರ್ಗದ ಬದಲು ನರಕದ ಹಾದಿಯನ್ನು ಕಾಣುವಂತಾಗಿದೆ.

—ಕುಚ್ಚಣ್ಣ ಶ್ರೀನಿವಾಸನ್

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in